

**1** ಈ ವರೆಗಿನ ದಲಿತ ಸಾಹಿತ್ಯವನ್ನು ಹಿಂತಿರುಗಿ ನೋಡಿದರೆ ಕಾವ್ಯ, ಆತ್ಮಕತೆ, ಹಾಗೂ ಇನ್ನಿತರ ಕಥನ ಪ್ರಕಾರಗಳಲ್ಲಿ ಜಾತಿ ಶೋಷಣೆಯ ಹಲವು ಮುಖಗಳು ಅನಾವರಣಗೊಂಡಿವೆ, ಸಹಜವಾಗಿಯೇ ತಮ್ಮ ಪೂರ್ವಿಕರಿಗಿಲ್ಲದ ಅಕ್ಷರ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಂವಿಧಾನದತ್ತವಾದ ಹಕ್ಕುಗಳ ಅರಿವಿನಿಂದ ಎಚ್ಚೆತ್ತ 'ದಲಿತ ಪ್ರಜ್ಞೆ'ಯಿಂದ ಬರೆಯಲಾರಂಭಿಸಿದವರಲ್ಲಿ ತಮ್ಮನ್ನು ಶೋಷಿಸಿದವರ ಮೇಲಿನ ಸಿಟ್ಟು, ಸೆಡವು, ಆಕ್ರೋಶ, ಆತ್ಮಾನುಕಂಪಗಳ ಅಳಲು ಕಡಿಮೆಯಾಗಿದೆ. ಹೋರಾಟದ ಹಾಡುಗಳ ಆಕ್ರೋಶ, ಆತ್ಮಕತೆಗಳ ವಸ್ತುವಿನ ಏಕತಾನತೆ ಕಡಿಮೆ ಆಗಿ, ಒಂದು ಸಮಾಜೋ ಸಾಂಸ್ಕೃತಿಕ ಅಸ್ಮಿತೆ, ರಾಜಕೀಯ ಪ್ರಾತಿನಿಧ್ಯಕ್ಕೆ ತುಡಿಯಲು ಹೊಸ ಪ್ರಯತ್ನಗಳು ಹೊಸ ಬರಹಗಾರರಲ್ಲಿ ಕಾಣಿಸಿಕೊಳ್ಳುತ್ತಿವೆ.

**2** ಕನ್ನಡ ಸಾಹಿತ್ಯ ಚಳವಳಿಗಳ ಭಾಗವಾಗಿಯೇ ಮೂಡಿಬಂದ ನವೋದಯ, ಪ್ರಗತಿಶೀಲ, ನವ್ಯದ ಹಾಗೆ ದಲಿತ ಸಾಹಿತ್ಯಕ್ಕೂ ತನ್ನ ಅನುಭವ ಲೋಕ, ಅಭಿವ್ಯಕ್ತಿ ಸ್ವರೂಪದ ವಿಭಿನ್ನ ಅನನ್ಯತೆ, ಅಸ್ಮಿತೆಗಳು ಇರುವುದರಿಂದ ಅಧ್ಯಯನದ ಅನುಕೂಲಕ್ಕಾಗಿ 'ದಲಿತ ಸಾಹಿತ್ಯ' ಎಂದು ಗುರುತಿಸುವುದು ಸರಿ ಮತ್ತು ಅನಿವಾರ್ಯ ಕೂಡ... ಆದರೆ, ದಲಿತರು ಬರೆದ ಸಾಹಿತ್ಯವನ್ನು ಗ್ರಹಿಸುವ ಮತ್ತು ಪರಿಭಾವಿಸುವ ಸಂದರ್ಭದಲ್ಲಿ ದಲಿತ ಜನಾಂಗವನ್ನು ಪರಿಭಾವಿಸುವ ಹಾಗೂ ಪರಿಗಣಿಸುವ ರೀತಿಯಲ್ಲಿ ಪರಿಭಾವಿಸುವುದು ಮಾತ್ರ ಬೇಡ.

**3** ದಲಿತ ಸಾಹಿತ್ಯಕ್ಕೆ ಸರಿಯಾದ ವಿಮರ್ಶೆ ಬಂದೇ ಇಲ್ಲ ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆ, ದಲಿತರು ಬರೆದ ಅನುಭವ ಲೋಕದ ಅರಿವಿರದ ಅದಕೆ ಅನ್ಯರಾದ ಹೊರಗಿನ ಸಮುದಾಯದವರೇ ಬರೆದ ವಿಮರ್ಶೆ ಬಂದಿದೆ. ದಲಿತರ ಬರವಣಿಗೆಯಲ್ಲಿ ಅದರ ಗೈರುಹಾಜರಿ ಇದೆ, ಇದರ ಗೈರುಹಾಜರಿ ಇದೆ, ಅದು ಕಲಾತ್ಮಕವಾಗಿಲ್ಲ, ಘೋಷಣೆಗಳಿಂದ ಕೂಡಿದೆ, ಇಂತಹ ಕೊರತೆ ಆರೋಪಗಳ ಪಟ್ಟಿಯನ್ನೊಳಗೊಂಡ ವಿಮರ್ಶೆ ಬಂದಿದೆ. ದಲಿತ ಲೇಖಕ ಮತ್ತು ಆ ಕೃತಿ ಹುಟ್ಟಿದ ಸಾಮಾಜಿಕ ಸನ್ನಿವೇಶ ಮತ್ತು ಅದರ ಚಾರಿತ್ರಿಕ ಒತ್ತಡಗಳ ಅರಿವೇ ಇರದವರು ನೀಡಿದ ತೀರ್ಪಿನಂತಿದೆ ಈವರೆಗೆ ಬಂದಿರುವ ದಲಿತ ಸಾಹಿತ್ಯ ಕುರಿತ ವಿಮರ್ಶೆ; ಅದೂ ಕೂಡಾ ಅಪೂರ್ಣವಾಗಿದೆ. ಸಿದ್ಧಲಿಂಗಯ್ಯ ಮತ್ತು ಎನ್.ಕೆ. ಹನುಮಂತಯ್ಯನವರೆಗೆ ಈ ವಿಮರ್ಶೆ ಬಂದು ನಿಂತುಬಿಟ್ಟಿದೆ. ತದನಂತರ ಬರೆಯುತ್ತಿರುವ ನೂರಾರು ಜನ ಹೊಸತಲೆಮಾರಿನ ದಲಿತ ಲೇಖಕರ ಕೃತಿಗಳನ್ನು ಈ ವಿಮರ್ಶೆ ಒಳಗೊಂಡೇ ಇಲ್ಲ.